# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀಪಿ.ಆರ್.ರಮೇಶ್<br>(ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (429)೩೬ |
| ಉತ್ತರಿಸಬೇಕಾದ ದಿನಾಂಕ | : | 23.09.2020 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ವಸತಿ ನಿರಾಶ್ರಿತರಿಗಾಗಿ ವಸತಿ ಕಲ್ಪಿಸಲು ಎಷ್ಟು ಯೋಜನೆ ಚಾಲ್ತಿಯಲ್ಲಿವೆ; (ಮಾಹಿತಿ ನೀಡುವುದು) | ರಾಜ್ಯದಲ್ಲಿ ವಸತಿ ನಿರಾಶ್ರಿತರಿಗಾಗಿ ಒಟ್ಟು ಈ ಕೆಳಕಂಡ ಯೋಜನೆಗಳು ಚಾಲ್ತಿಯಲ್ಲಿವೆ.<br>**ರಾಜ್ಯ ಸರ್ಕಾರದ ಯೋಜನೆಗಳು** :<br>• ಬಸವ ವಸತಿ ಯೋಜನೆ<br>• ಡಾ :ಬಿ.ಆರ್.ಅಂಬೇಡ್ಕ ರ್ ವಸತಿ ಯೋಜನೆ (ಗ್ರಾಮೀಣ ಮತ್ತು ನಗರ)<br>• ವಾಜಪೇಯಿ ನಗರ ವಸತಿ ಯೋಜನೆ<br>• ಮುಖ್ಯ ಮಂತ್ರಿಗಳ ಒಂದು ಲಕ್ಷ ಬಹು ಮಹಡಿ ಬೆಂಗಳೂರು ವಸತಿ ಯೋಜನೆ<br>• ದೇವರಾಜ್ ಅರಸು ವಸತಿ ಯೋಜನೆ (ಗ್ರಾಮೀಣ ಮತ್ತು ನಗರ)<br>**ಕೇಂದ್ರಪುರಸ್ಕೃತಯೋಜನೆಗಳು**:<br>ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ ಮತ್ತು ನಗರ).<br>ರಾಜ್ಯದಲ್ಲಿ ನಿವೇಶನ ರಹಿತರಿಗೆ ನಿವೇಶನ ಒದಗಿಸುವ ಸಲುವಾಗಿ ಈ ಕೆಳಕಂಡ ನಿವೇಶನ ಯೋಜನೆಗಳು ಚಾಲ್ತಿಯಲ್ಲಿವೆ.<br>• ಇಂದಿರಾ ಗ್ರಾಮೀಣ ವಸತಿ ನಿವೇಶನ ಯೋಜನೆ<br>• ವಾಜಪೇಯಿ ನಗರ ನಿವೇಶನ ಯೋಜನೆ |
| (ಆ) | ಕಳೆದ 3 ವರ್ಷಗಳಿಂದ ವಸತಿ ನಿರಾಶ್ರಿತರನ್ನು ಗುರುತಿಸಲು ಯಾವುದಾದರು ಸಮೀಕ್ಷೆ ನಡೆಸಲಾಗಿದೆಯೇ; (ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದ ನಿರ್ದೇಶನದಂತೆ 2018 ರಲ್ಲಿ ರಾಜ್ಯಾದ್ಯಂತ ಗ್ರಾಮೀಣ ಪ್ರದೇಶದಲ್ಲಿ ವಸತಿ ರಹಿತರ ಹಾಗೂ ನಿವೇಶನ ರಹಿತರ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ಇದರನ್ವಯ ರಾಜ್ಯದಲ್ಲಿ 18,71,724 ವಸತಿ ರಹಿತರು, 7,05,719 ನಿವೇಶನ ರಹಿತರಿದ್ದು, ಒಟ್ಟಾರೆಯಾಗಿ 25,77,443 ವಸತಿ/ನಿವೇಶನ ರಹಿತರಿದ್ದಾರೆ.<br>ರಾಜ್ಯದಾದ್ಯಂತ ನಗರ ಪ್ರದೇಶದಲ್ಲಿ ನಡೆದ ಬೇಡಿಕೆ ಸಮೀಕ್ಷೆಯ ಅನ್ವಯ ರಾಜ್ಯದಲ್ಲಿ 3,09,909 ವಸತಿ ರಹಿತರು ಮತ್ತು 10,77,488 ನಿವೇಶನ ರಹಿತರಿದ್ದು, ಒಟ್ಟಾರೆಯಾಗಿ 13,87,397 ವಸತಿ/ನಿವೇಶನ ರಹಿತರಿರುವುದು ಕಂಡು ಬಂದಿದೆ. |

| | | |
|---|---|---|
| (ಇ) | ವಸತಿ ಯೋಜನೆಗಳಲ್ಲಿ ಹಲವು ಗ್ರಾಮಗಳಿಗೆ ನೀಡಿದ ಮೀಸಲಾತಿಯ ಗುರಿ ತಲುಪದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು, ಮೀಸಲಾತಿವಾರು ಮಾಹಿತಿ ನೀಡುವುದು) | ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ನಿಗದಿಪಡಿಸಲಾದ ಗುರಿಯನ್ನು ಜಿಲ್ಲಾ ಪಂಚಾಯತಿಗೆ, ತಾಲ್ಲೂಕು ಪಂಚಾಯತಿಗೆ, ತಾಲ್ಲೂಕು ಪಂಚಾಯತಿ ಮೂಲಕ ಗ್ರಾಮ ಪಂಚಾಯತಿಗಳಿಗೆ ಮತ್ತು ಸ್ಥಳೀಯ ಶಾಸಕರುಗಳಿಗೆ ಪತ್ರದ ಮೂಲಕ ವ್ಯವಹರಿಸಲಾಗಿರುತ್ತದೆ. ಅಲ್ಲದೇ ನಿಗಮದ ವೆಬ್ ಸೈಟಿನಲ್ಲಿ ಆನ್ ಲೈನ್ ಮೂಲಕ ಸಹ ಗುರಿಯ ಮಾಹಿತಿ ಲಭ್ಯವಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. 2016-17 ರಿಂದ 2019-20 ರವರೆಗಿನ ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮ ಪಂಚಾಯತಿವಾರು ಹಾಗೂ ಮೀಸಲಾತಿವಾರು ಗುರಿಯನ್ನು ಹಾಗೂ ಆಯ್ಕೆಯ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| (ಈ) | ಗುರುತಿಸಿದ ಗ್ರಾಮಗಳಿಗೆ ಮರಳಿ ಅದೇ ಗುರಿಗಳನ್ನು ನೀಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದು ಕೊಂಡ ಕ್ರಮವೇನು; | |
| (ಉ) | ಕೆಲವೊಂದು ಜಿಲ್ಲೆಗಳಲ್ಲಿ ಒಂದೇ ಕುಟುಂಬವು ಹಲವು ವಸತಿ ಯೋಜನೆಗಳ ಫಲಾನುಭವಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಗ್ರಾಮ ಪಂಚಾಯತಿಯಲ್ಲಿ ಫಲಾನುಭವಿಗಳನ್ನು ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಲಾಗುತ್ತಿದೆ. ಮಾರ್ಗಸೂಚಿಯನ್ವಯ ಒಬ್ಬನೇ ಫಲಾನುಭವಿಯು ಎರಡು-ಮೂರು ಬಾರಿ ಮನೆಗಳನ್ನು ಪಡೆಯಲು ಅವಕಾಶವಿಲ್ಲ. ಒಂದೊಮ್ಮೆ ಸದರಿ ಮಾರ್ಗಸೂಚಿಗಳನ್ನು ಅನುಸರಿಸದಿದ್ದಲ್ಲಿ ಸಂಬಂಧಿಸಿದವರ ಮೇಲೆ ಸೂಕ್ತ ಕ್ರಮ ವಹಿಸಲಾಗುವುದು. |
| (ಊ) | ಒಂದೇ ಕುಟುಂಬಕ್ಕೆ ಹಲವು ಯೋಜನೆಗಳಿಂದ ಮನೆ ಹಂಚಿಕೆಯಾಗುವುದನ್ನು ತಡೆಯಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಒಬ್ಬನೇ ಫಲಾನುಭವಿಯು ಹಲವು ಬಾರಿ ಬೇರೆ ಬೇರೆ ವಸತಿ ಯೋಜನೆಗಳಲ್ಲಿ ಮನೆಗಳನ್ನು ಪಡೆದಿರುವ ಕುರಿತು ನಕಲು ಫಲಾನುಭವಿಗಳನ್ನು ಪತ್ತೆ ಹಚ್ಚುವ ಸಲುವಾಗಿ ಇತ್ತೀಚಿಗೆ ನಿಗಮವು Vigil App ಸಾಫ್ಟ್‌ವೇರ್‌ನ್ನು ಅಭಿವೃದ್ಧಿ-ಪಡಿಸಲಾಗಿದೆ. ಈ ಸಾಫ್ಟ್‌ವೇರ್ ಮೂಲಕ ಒಂದೇ ಆಧಾರ್ ಸಂಖ್ಯೆಯನ್ನು ನಮೂದಿಸಿರುವ ಫಲಾನುಭವಿಗಳನ್ನು UID Duplicate ಫಲಾನುಭವಿಗಳೆಂದು ಹಾಗೂ ಆಧಾರ್ ಸಂಖ್ಯೆ ಇಲ್ಲದೇ ಫಲಾನುಭವಿಗಳ ಹೆಸರಿನ ಸಾಮ್ಯತೆ ಇರುವವರನ್ನು Name Duplicate ಎಂದು ಗುರ್ತಿಸಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ನಲ್ಲಿ ವಿವರಗಳನ್ನುನೀಡಲಾಗಿದೆ.<br>1. UID Duplicate ಆಗಿರುವ ಫಲಾನುಭವಿಗಳು ಎರಡು ಹಾಗೂ ಅದಕ್ಕಿಂತ ಹೆಚ್ಚಿನ ಯೋಜನೆಗಳಲ್ಲಿ ಆಯ್ಕೆಯಾಗಿರುವುದು ರುಜುವಾತಾಗಿರುವುದರಿಂದ ಕೂಡಲೇ ಸದರಿ ಫಲಾನುಭವಿಗಳಿಗೆ ಬಿಡುಗಡೆಯಾಗಿರುವ ಅನುದಾನವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಮರಳಿಸುವುದು ಹಾಗೂ ಅಂತಹ ಫಲಾನುಭವಿಗಳ ಮೇಲೆ ಕೂಡಲೇ ಶಿಸ್ತು ಕ್ರಮ ವಹಿಸಲಾಗುತ್ತಿದೆ.<br>2. Name Duplicate ಆಗಿರುವ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಕೂಡಲೇ ಆಧಾರ್ ಸಂಖ್ಯೆಯನ್ನು |

| | | |
|---|---|---|
| | | ನಮೂದಿಸುವುದು. ಒಂದು ವೇಳೆ ಒಂದೇ ಹೆಸರಿನ ಹೋಲಿಕೆ ಇದ್ದು ಬೇರೆ ಬೇರೆ ಫಲಾನುಭವಿಗಳಾಗಿದ್ದಲ್ಲಿ ಕ್ರಮ ವಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆಧಾರ್ ಸಂಖ್ಯೆಯನ್ನು ನಮೂದಿಸಿದಾಗ ಫಲಾನುಭವಿಯು ಎರಡು ಅಥವಾ ಅದಕ್ಕಿಂತ ಹೆಚ್ಚು ವಸತಿ ಯೋಜನೆಯಡಿ ವಸತಿ ಸೌಕರ್ಯ ಪಡೆದಿರುವುದು ಕಂಡು ಬಂದಲ್ಲಿ ಸೂಕ್ತ ಶಿಸ್ತು ಕ್ರಮ ವಹಿಸಲಾಗುತ್ತಿದೆ.<br><br>ಒಂದಕ್ಕಿಂತ ಹೆಚ್ಚು ವಸತಿ ಸೌಕರ್ಯ ಪಡೆದಿರುವುದು ಕಂಡು ಬಂದಲ್ಲಿ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ನೇರ ಹೊಣೆಗಾರರಾಗುತ್ತಾರೆಂದು ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ. |

ಸಂಖ್ಯೆ :ವಇ 276 ಹೆಚ್‌ಎಎಂ 2020

**(ವಿ. ಸೋಮಣ್ಣ)**
ವಸತಿ ಸಚಿವರು